# ಜಿನಭಜನಸಾರ



ಪಂಡಿತರತ್ನ

**ಎ. ಶಾಂತಿರಾಜ ಶಾಸ್ತ್ರಿ ಟ್ರಸ್ಟ**

ಜನ್ಮ ಶತಾಬ್ದ 1888-1988



ಜನ್ಮಶತಾಬ್ದಿ ಪ್ರಕಟಣೆ-೨

# ಜಿನಭಜನಸಾರ

ಲೇಖಕರು :
ಎರ್ತೂರು ಶಾಂತಿರಾಜಶಾಸ್ತ್ರಿ

ಪ್ರಕಾಶನ :
ಪಂಡಿತರತ್ನ ಎರ್ತೂರು ಶಾಂತಿರಾಜಶಾಸ್ತ್ರಿ ಟ್ರಸ್ಟ್
ಜನ್ಮ ಶತಾಬ್ದಿ ೧೮೮೮-೧೯೮೮

# ಶುಭಾಶೀರ್ವಾದ

ದಿ|| ಪಂಡಿತರತ್ನ ಎ. ಶಾಂತಿರಾಜ ಶಾಸ್ತ್ರಿಗಳ ಪೂಜಾ ಗ್ರಂಥವಾದ ಜಿನಭಜನಸಾರದ ಆರನೇ ಪುನರ್ಮುದ್ರಣದ ಕಾರ್ಯಕ್ಕೆ ನಮ್ಮ ಶುಭಾಶೀರ್ವಾದಗಳು.

ಪಂ|| ಶಾಂತಿರಾಜ ಶಾಸ್ತ್ರಿಗಳು ಜೈನ ಸಾಹಿತ್ಯಕ್ಕೂ ಹಾಗೂ ಕನ್ನಡ ಸಾಹಿತ್ಯಕ್ಕೂ ಸಲ್ಲಿಸಿದ ಸೇವೆ ಅಮೋಘವಾದದ್ದು. ಘನ ವಿದ್ವಾಂಸರು ಜೈನ ಸಮಾಜಕ್ಕೆ ಮಾಡಿದ ಸೇವೆ ಅಪಾರವಾದದ್ದು. ಕನ್ನಡವಲ್ಲದೆ ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಲ್ಲಿ ಬರೆದ ಅವರ ಕೃತಿಗಳ ಪ್ರತಿಭೆ ಅಪೂರ್ವವಾದದ್ದು. ಅವರ ಸರಳ ಸಜ್ಜನಿಕೆಯ ಜೀವನವು ಸಮಾಜಕ್ಕೆ ಆದರ್ಶಪ್ರಾಯವಾಗಿದೆ.

"ಜಿನಭಜನಸಾರವು" ಸಂಗೀತದ ಮೂಲಕ ವೀತರಾಗ ಭಗವಂತರ ಆರಾಧನೆಗೂ ತಥಾ ಶುಭೋಪಯೋಗಕ್ಕೂ ಸನ್ಮಾರ್ಗವಾಗಿದೆ.

ಪ್ರಸ್ತುತ ಗ್ರಂಥವು ಈಗಾಗಲೇ ಐದು ಬಾರಿ ಅಚ್ಚಾಗಿದೆ. ಈ ಪೂಜಾ ಗ್ರಂಥದ ಒಂದು ಸಾವಿರ ಪ್ರತಿಗಳ ಆರನೇ ಪುನರ್ಮುದ್ರಣಕ್ಕೆ ಮುನಿಭಕ್ತರೂ, ಧರ್ಮಾಭಿಮಾನಿಗಳೂ ಆದ ಬೆಂಗಳೂರಿನ ಶ್ರೀ ಎಂ.ಸಿ. ಅನಂತರಾಜಯ್ಯನವರು ಮತ್ತು ಹಿಂದೂಪುರದ ಶ್ರೀ ಎ.ಸಿ. ನಾಗರಾಜಯ್ಯನವರು ಇದರ ೫೦೦ ಪ್ರತಿಗಳ ಪುನರ್ಮುದ್ರಣಕ್ಕೆ ಸ್ವಸಂತೋಷದಿಂದ ಮುಂದೆ ಬಂದಿದ್ದು, ಜಿನಮಾತೆಯ ಸೇವೆ ಸಲ್ಲಿಸುತ್ತಲಿರುವುದು ಸ್ತುತ್ಯಾರ್ಹ. ಅವರಿಗೂ ಅವರ ಪರಿವಾರದವರಿಗೂ ನಮ್ಮ ಶುಭಾಶೀರ್ವಾದಗಳು.

"ಭಕ್ತಿ" ಇದು ಪರಂಪರೆಯಿಂದ ಮೋಕ್ಷಕ್ಕೆ ಕಾರಣವಾಗಿದೆ. ಅಷ್ಟೇ ಅಲ್ಲ ಜಿನಭಕ್ತಿಯಲ್ಲಿ ಆತ್ಮಾನುಸಂಧಾನವು ಅಡಕವಾಗಿದೆ.

**ಆಚಾರ್ಯ ವಿದ್ಯಾನಂದ ಮುನಿ**

# : ಪ್ರಕಾಶಕರ ವಿಜ್ಞಾಪನೆ :

ಬಹುಜನಪ್ರಿಯವಾದ ಈ ಜಿನಭಜನಸಾರ ಗ್ರಂಥವನ್ನು ಹಿಂದೆ ೧೯೧೬ ರಿಂದ ೧೯೫೭ ರವರೆಗೆ ನಾಲ್ಕು ಬಾರಿ ಸ್ವರ್ಗೀಯ ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿಗಳವರೇ ಮುದ್ರಣ ಮಾಡಿಸಿ ಪ್ರಕಾಶಪಡಿಸಿದ್ದರು. ನಂತರ ೧೯೮೮ರಲ್ಲಿ ಧರ್ಮಾಭಿಮಾನಿಗಳಾದ ಹಾಸನದ ಅಣೆಕಾರ್ ಶ್ರೀ ಹೆಚ್. ಪಿ. ಬ್ರಹ್ಮಪ್ಪನವರು ಮತ್ತು ಬೆಳ್ಳೂರಿನ ಶ್ರೀ ಬಿ. ಧರಣೇಂದ್ರಯ್ಯನವರು ಈ ಗ್ರಂಥದ ಐದನೇ ಮುದ್ರಣದ ಖರ್ಚನ್ನು ವಹಿಸಿ ಪ್ರಕಾಶಪಡಿಸಿದರು.

ಐದನೇ ಮುದ್ರಣದ ಎಲ್ಲ ಪ್ರತಿಗಳೂ ಕೇವಲ ಒಂದೇ ವರ್ಷದಲ್ಲಿ ಮುಗಿದು ಹೋಗಿ ಇದಕ್ಕೆ ಬೇಡಿಕೆ ಇನ್ನೂ ಹೆಚ್ಚುತ್ತಲೇ ಇರುವುದರಿಂದ ಈಗ ಇದರ ಆರನೇ ಮುದ್ರಣಕ್ಕೆ ಬೆಂಗಳೂರಿನ ಖ್ಯಾತ ವಾಣಿಜ್ಯೋದ್ಯಮಿಗಳೂ ಧರ್ಮಪ್ರವರ್ತಕರೂ ಆದ ಸನ್ಮಾನ್ಯ ಶ್ರೀ ಎಂ.ಸಿ. ಅನಂತರಾಜಯ್ಯನವರು (೧೦೦೦ ಪ್ರತಿಗಳಿಗೂ) ಮತ್ತು ಹಿಂದೂಪುರದ ಧರ್ಮಾಭಿಮಾನಿಗಳಾದ ಸನ್ಮಾನ್ಯ ಶ್ರೀ ಎ.ಸಿ. ನಾಗರಾಜಯ್ಯನವರು (೫೦೦ ಪ್ರತಿಗಳಿಗೂ) ಧನ ಸಹಾಯ ಮಾಡಿರುತ್ತಾರೆ. ಇವರುಗಳ ಧರ್ಮಶ್ರದ್ಧೆ ಪ್ರಶಂಸನೀಯ. ಇವರಿಗೆ ಟ್ರಸ್ಟ್ ಆಭಾರಿಯಾಗಿದೆ.

ಈ ಮುದ್ರಣದಲ್ಲಿ ಪ್ರತಿಯೊಂದು ಶ್ಲೋಕಗಳನ್ನೂ ಪ್ರತ್ಯೇಕ ಪ್ಯಾರಾ ರೂಪದಲ್ಲಿ, ಭಜನೆ ಮಾಡಲು ಅನುಕೂಲವಾಗುವಂತೆ ಅಳವಡಿಸಿ ಸ್ವ|| ಶಾಸ್ತ್ರಿಗಳ ಮೂಲ ಮುನ್ನುಡಿಯೊಡನೆ ಹೊರತರಲಾಗಿದೆ. ಕಾಗದದ ಬೆಲೆ ಅತಿಯಾಗಿ ಏರಿರುವುದರಿಂದ ಈ ಬಾರಿ ಗ್ರಂಥದ ಬೆಲೆಯಲ್ಲಿ ಸ್ವಲ್ಪ ಹೆಚ್ಚಳ ಮಾಡಲಾಗಿದೆ.

ಶ್ರೀಕ್ಷೇತ್ರ ಶಾಂತಿಗಿರಿಯ (ಕೊಥಳಿ) ಪರಮಪೂಜ್ಯ ೧೦೮ ಶ್ರೀ ವಿದ್ಯಾನಂದ ಮುನಿ ಮಹಾರಾಜರವರು ದಾನಿಗಳ ಅಪೇಕ್ಷೆಯಂತೆ ಈ ಮುದ್ರಣಕ್ಕೆ ತಮ್ಮ "ಶುಭಾಶೀರ್ವಚನ" ದಯಪಾಲಿಸಿರುತ್ತಾರೆ. ಅವರಿಗೆ ಈ ಟ್ರಸ್ಟ್ ಭಕ್ತಿಪೂರ್ವಕ ಕೃತಜ್ಞತೆಗಳನ್ನು ಸಮರ್ಪಿಸುತ್ತದೆ.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಶ್ರೀ ಭಗವತಿ ಪ್ರಿಂಟರ್ಸ್, ಬೆಂಗಳೂರು ಇವರಿಗೂ, ಅಂದವಾದ ರಕ್ಷಾಕವಚವನ್ನು ರಚಿಸಿಕೊಟ್ಟ ಬೆಂಗಳೂರಿನ ಶ್ರೀ ಆರ್. ಎಸ್. ಪದ್ಮರಾಜ್‌ರವರಿಗೂ ಮತ್ತು ರಕ್ಷಾಕವಚವನ್ನು ಅಂದವಾಗಿ ಮುದ್ರಿಸಿಕೊಟ್ಟ ಬೆಂಗಳೂರಿನ ಬಿ.ಬಿ.ಡಿ. ಪವರ್‌ಪ್ರೆಸ್‌ನ ಮಾಲಿಕರು —ಇವರೆಲ್ಲರಿಗೂ ಟ್ರಸ್ಟ್ ತುಂಬು ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಬೆಂಗಳೂರು
೧೦.೮.೧೯೮೮

**ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್**

# ಸಮರ್ಪಣೆ




ಪರಮಪೂಜ್ಯ ೧೦೮ ಶ್ರೀ ವಿದ್ಯಾನಂದ ಮುನಿಮಹಾರಾಜರವರು



ಶ್ರೀ ಯಂ.ಸಿ. ಅನಂತರಾಜಯ್ಯ ಮತ್ತು ಶ್ರೀಮತಿ ಎಂ.ಸಿ ಎ. ಕೌಸಲ್ಯಮ್ಮ

ಭಾರತಾದ್ಯಂತ ನಮ್ಮಂತಹ ಲಕ್ಷಾಂತರ ಶ್ರಾವಕ-ಶ್ರಾವಕಿಯರಿಗೆ ಜ್ಞಾನಗಂಗೆಯನ್ನು ನೀಡಿ ಪರಮಜಿನ ಸತ್ಯತತ್ತ್ವಗಳನ್ನೂ ಭೋಧಿಸಿ-ತಿಳುವಳಿಕೆ ಉಂಟುಮಾಡಿ-ಶ್ರದ್ಧಾ ಮತ್ತು ಜ್ಞಾನಗಳಲ್ಲಿ ಸ್ಥಿರಚಿತ್ತರಾಗುವಂತೆ ಪ್ರೇರೇಪಿಸಿದ ಪರಮ ಗುರು ವಿಶ್ವಧರ್ಮಪ್ರೇರಕ – ಆಚಾರ್ಯ ಶ್ರೀ ೧೦೮ ಶ್ರೀ ವಿದ್ಯಾನಂದ ಮುನಿಮಹಾರಾಜರವರ ಕರಕಮಲದಲ್ಲಿ ಭಕ್ತಿ - ನಮನ ಪೂರ್ವಕ ಅರ್ಪಿತ.

# ಸಮರ್ಪಣೆ



ಶ್ರೀ ಎ.ಸಿ. ನಾಗರಾಜಯ್ಯನವರು, ಹಿಂದೂಪುರ.

ಶ್ರೀ ಎ ಸಿ.ನಾಗರಾಜಯ್ಯನವರು ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಪವಿತ್ರ ಜೈನಕ್ಷೇತ್ರ ನಿಟ್ಟೂರು ಬಳಿ ಇರುವ ಅದಲಗೆರೆಯ ಧರ್ಮಾನುರಾಗಿ ಶ್ರೀ ಎ.ಪಿ. ಚಂದ್ರಯ್ಯ - ಶ್ರೀಮತಿ ಜ್ವಾಲಮ್ಮರವರ ತೃತೀಯ ಪುತ್ರ. ಶ್ರೀಯುತರುಗಳಾದ ಸ್ವ॥ ಎ.ಸಿ. ಬ್ರಹ್ಮಯ್ಯ (ಅಗಳಿ),ಎ.ಸಿ. ಯುವರಾಜಯ್ಯ, ಎ.ಸಿ. ಸೂರಣ್ಣ (ಅದಲಗೆರೆ), ಎ.ಸಿ. ನೇಮಿಚಂದ್ರ ,ಎ.ಸಿ. ಧರ್ಮಪಾಲ್ (ತುಮಕೂರು)ಮತ್ತು ಎ.ಸಿ. ಚಾರಣ್ಣ (ಹಿಂದೂಪುರ) ಇವರ ಸಹೋದರರು. ಶ್ರೀಮತಿ ಪದ್ಮಾವತಮ್ಮ (ಸ್ವ॥ ಚಾರಣ್ಣನವರ ಧರ್ಮಪತ್ನಿ) ಹಿಂದೂಪುರ, ಸ್ವ॥ ಶ್ರೀಮತಿ ಮಧುರಮ್ಮ (ಶ್ರೀಎ.ಜಿ. ಲಕ್ಷ್ಮೀಪತಯ್ಯ, ಅಗಳಿ, ರವರ ಧರ್ಮಪತ್ನಿ) ಮತ್ತು ಶ್ರೀಮತಿ ಮಧುರಾಜಮ್ಮ (ಸ್ವ॥ ಟಿ.ಆರ್. ಅಪ್ಪಣ್ಣಶೆಟ್ಟಿ, ತುಮಕೂರು, ರವರ ಧರ್ಮಪತ್ನಿ) ಇವರು ಶ್ರೀ ಎ.ಸಿ. ನಾಗರಾಜಯ್ಯನವರ ಸಹೋದರಿಯರು. ಸ್ವ॥ ಶ್ರೀಮತಿ ಮಧುರಮ್ಮನವರು ಜಿನಭಜನಸಾರದ ತ್ರಿಲೋಕ ಚರಿತ್ರೆಯನ್ನು ಕಂಠಪಾಠಮಾಡಿ ಸುಶ್ರಾವ್ಯವಾಗಿ ಹಾಡುತ್ತಿದ್ದರು.

ಶ್ರೀ ಎ.ಸಿ. ನಾಗರಾಜಯ್ಯನವರಿಗೆ ವೇದಲವೇಣಿಯ ಧರ್ಮಪರಾಯಣರಾದ ಸ್ವ॥ ಶ್ರೀ ಆರ್.ಎನ್.ನೇಮಿರಾಜಯ್ಯ - ಶ್ರೀಮತಿ ರಾಜಮ್ಮ

ಇವರ ಏಕೈಕ ಪುತ್ರಿ ಸ್ವ॥ ಶ್ರೀಮತಿ ಸುಮಂಗಲಮ್ಮನವರೊಡನೆ ವಿವಾಹವಾಗಿದ್ದು ಶ್ರೀ ಎ ಎನ್. ಚಂದ್ರಕೀರ್ತಿ ಎಂಬ ಪುತ್ರನೂ ಶ್ರೀಮತಿಯರಾದ ಸಾವಿತ್ರಮ್ಮ (ಹಾಸನ), ಬ್ರಾಹ್ಮಿಲಮ್ಮ (ಬೆಂಗಳೂರು), ಜ್ವಾಲಮ್ಮ (ಪಾವಗಡ) ಮತ್ತು ಜಯಪದ್ಮ (ಬಿಳಿಚೋಡು) ಎಂಬ ನಾಲ್ವರು ಪುತ್ರಿಯರನ್ನು ಪಡೆದಿರುತ್ತಾರೆ.

ಶ್ರೀ ಎ. ಸಿ. ನಾಗರಾಜಯ್ಯನವರು ಧರ್ಮಶ್ರದ್ಧೆಯಿಂದ ಜಿನದತ್ತರಾಯಚರಿತ್ರೆ, ಜ್ವಾಲಮಾಲಿನಿ ಮಹಾತ್ಮ್ಯೆ, ನಿತ್ಯಪೂಜಾವಿಧಿ, ಜಿನತೀರ್ಥವಂದನಾ, ಜ್ವಾಲಾಮಾಲಾಪೂಜಾದಿಸಂಗ್ರಹ, ಶತಕದ್ವಯ ಇತ್ಯಾದಿ ಗ್ರಂಥಪ್ರಕಾಶನ ಮಾಡಿಸಿ ಸ್ವಾಧ್ಯಾಯ ಪ್ರಿಯರಾಗಿರುತ್ತಾರೆ. ಶ್ರೀ ಎ. ಸಿ. ನಾಗರಾಜಯ್ಯನವರು ಈ

## ಜಿನಭಜನಸಾರ

ಗ್ರಂಥದ ಆರನೇ ಮುದ್ರಣದ ೫೦೦ ಪ್ರತಿಗಳ ಖರ್ಚನ್ನು ವಹಿಸಿರುತ್ತಾರೆ. ಇವರಿಗೆ ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್ ಆಭಾರಿಯಾಗಿದೆ.

# ಮುನ್ನುಡಿ

(ಚತುರ್ಥ ಮುದ್ರಣದ್ದು)

ಓಂಕಾರಕ್ಕೆ ಪ್ರಣವವೆಂದು ಹೆಸರಿದೆ. ಇದು, ದೇವತಾವಾಚಕವೆಂದು ಅನ್ಯರು ಹೇಳುವಂತೆ, ನಾವು–ಜೈನರೂ "ಅರಹಂತಾ ಅಸರೀರಾ ಆಇರಿಯಾ ತಹ ಉವಜ್ಝಯಾ ಮುಣಿಣೋ । ಪಢಮಕ್ಖರಣಿಪ್ಪಣ್ಣೋ ಓಂಕಾರೋ ಪಂಚಪರಮೆಟ್ಠೀ" ॥ ಹೀಗೆ ಪಂಚಪರಮೇಷ್ಠಿವಾಚಕವೆಂದು ಹೇಳುತ್ತೇವೆ. ಈ ಪ್ರಣವನಾದದಿಂದ "ಸರಿಗಮಪಧನಿ" ಎಂಬೀ ಸಪ್ತ ಸ್ವರಗಳು ಹುಟ್ಟಿವೆಯೆಂದೂ ಇವುಗಳನ್ನು ಬೇರೆ ಬೇರೆ ವಿಧವಾಗಿ ಜೋಡಿಸುವುದರಿಂದ ಕೀರ್ತನಾದಿಗಳಾಗುತ್ತವೆಂದೂ ಹೇಳುತ್ತಾರೆ.

ಸಾಮಾನ್ಯವಾಗಿ ದೇವರ ಭಜನೆಗೆ ಕೀರ್ತನೆಗಳನ್ನು ಉಪಯೋಗಿಸುವುದೂ ಇವುಗಳನ್ನು ರಾಗ ತಾಳ ಲಯಗಳಿಗನುಸಾರವಾಗಿ ಹಾಡುವುದೂ ಪದ್ಧತಿಯಾಗಿದೆ. ಹೀಗೆ ಹಾಡುವುದಕ್ಕೆ ಗಾಯನವೆಂದೂ ಸಂಗೀತವೆಂದೂ ಹೆಸರು. ಇದು ಶೃಂಗಾರರಸಪ್ರಧಾನವಾದುದು. ಈ ರಸವನ್ನು "ಶಿಶುರ್ವೇತ್ತಿ ಪಶುರ್ವೇತ್ತಿ ವೇತ್ತಿ ಗಾನರಸಂ ಫಣೀ। ಸಾಹಿತ್ಯ ರಸಮಾಧುರ್ಯಂ ಶಂಕರೋ ವೇತ್ತಿ ವಾ ನ ವಾ–ಎನ್ನುವಂತೆ ಶಿಶುವೂ ಪಶು-ಹರಿಣವೂ ಸರ್ಪವೂ ತಿಳಿಯುತ್ತವೆ. ಕಾವ್ಯ ಚಂಪೂ ನಾಟಕಾದಿ ಸಾಹಿತ್ಯರಸದ ಮಾಧುರ್ಯವನ್ನು ಶಂಕರನೂ ತಿಳಿಯುತ್ತಾನೋ ಇಲ್ಲವೋ" ಎಂಬುದು ಈ ಶ್ಲೋಕದ ಅಭಿಪ್ರಾಯವಾಗಿದೆ.

ಈ ಗಾಯನ–ಸಂಗೀತದ ಮಹತ್ತ್ವವು ರೇವಣಸಿದ್ಧೇಶ್ವರಪುರಾಣದಲ್ಲಿ

"ಕಲ್ಲು ಕರಗುವುದು-ಉಗ್ರಫಣಿ ಸೋಲ್ವುದು–
ಒಣಮರಂ ಪಲ್ಲವಿಪುದು–ಎರಲೆ ಸಿಲುಕುವುದು–
ಪಶು ಮೋಹಿಪುದು–ನಿಲ್ಲದೆ ಅಳುವ ಎಳೆ ಪಸುಳೆ
ಸಂತಸಮನಯ್ದುವುದು–ಮುಗಿಲು ಒಸರ್ದು ಮಳೆ
ಗರೆವುದು–ಸಲ್ಲಲಿತಸಂಗೀತರಸಕೇ"

ಎಂದು ಉಪವರ್ಣಿತವಾಗಿದೆ.

ಗ್ರೀಕ್ ದೇಶದ ಅರ್ಫಿಯಸ್ ಎಂಬ ದೊಡ್ಡ ಸಂಗೀತ ವಿದ್ವಾಂಸನು ಹಾಡಿದಾಗ ಕಲ್ಲು ಕರಗಿತೆಂದು ಪ್ರಸಿದ್ಧಿ ಇದೆ. ಶ್ರೀ ಕೃಷ್ಣನ ಮುರಲೀಗಾನವು ಒಣಮರವನ್ನು ಚಿಗುರಿಸಿತೆಂದು ಭಾಗವತದಲ್ಲಿ ವರ್ಣಿಸಲ್ಪಟ್ಟಿದೆ.

ಗೋಪಿಕಾಸ್ತ್ರೀಯೋರ್ವಳು ಶ್ರೀ ಕೃಷ್ಣನನ್ನು ಕುರಿತು "ಅಯ್ಯಾ ಮಾಧವನೇ! ಮಹಾಧ್ವನಿಯುಳ್ಳುದೂ ಮಧುರವೂ ಆದ ಕೊಳಲನ್ನು, ಅಡಿಗೆ ಮಾಡುವಾಗ ಊದಬೇಡ. ಅದರಿಂದ ಒಣಮರವು (ಕಟ್ಟಿಗೆಯು) ಚಿಗುರುವುದು; ಬೆಂಕಿಯಾದರೋ ಆರುವುದು" ಎಂದು ಹೇಳಿರುತ್ತಾಳೆಂಬುದು ಮುಂದಿನ ಶ್ಲೋಕದಿಂದ ವ್ಯಕ್ತವಾಗುವುದು:-

"ಮಾಧವ! ರಂಧನಸಮಯೇ ಮಾ ರವ ಮುರಲೀಂ ಮಹಾರವಾಂ ಮಧುರಾಂ ।
ನೀರಸತರುರಿಹ ರಸತೇ ಕೃಶತಾಂತು ಕೃಶಾನುರಭ್ಯೇತಿ ॥"

ಭಾರತಚಂಪುವಿನ ಪ್ರಥಮ ಸ್ತಬಕದ ಎಂಟನೆಯ ಶ್ಲೋಕದಲ್ಲಿ ಹಸ್ತಿನಾಪುರದ ಮಹಿಳೆಯರು ರಾಗಾಲಾಪನೆಯನ್ನು ಮಾಡುತ್ತಿದ್ದಾಗ ಅವರ ತೊಡೆಯ ಮೇಲಿದ್ದ ವೀಣೆಯು ಚಿಗುರಿ ಹೂವನ್ನು ಬಿಟ್ಟುದರಿಂದ ಅದರ ಪರಿಮಳಕ್ಕೆ ಮುತ್ತಿದ ದುಂಬಿಗಳ ನಾದದ ಗುಂಪುಳ್ಳ ತಂತಿಗಳ ನಾದವೂ ಆ ಮಹಿಳೆಯರ ಸ್ವರವೂ ಸಮ್ಮಿಲಿತವಾಗಿರಲು ಅವುಗಳ ತಾರತಮ್ಯವನ್ನು ಚತುರನೂ ತಿಳಿಯುವುದಿಲ್ಲವೆಂದು ಹೇಳಿದೆ. ಆ ಶ್ಲೋಕವಿದು-

"ಆಲಾಪಕಾಲಸಮುಪಲ್ಲವಿತಾಂಕವೀಣಾ
ಸೌರಭ್ಯಪಾತಿ ಮಧುಪಾರವಸಂಕುಲಸ್ಯ ।
ತಂತ್ರೀಸ್ವನಸ್ಯ ಸಮಿತೌ ತರುಣೀಸ್ವರಸ್ಯ
ಜಾನಾತಿ ಯತ್ರ ಚತುರೋಽಪಿ ನ ತಾರತಮ್ಯಂ ॥"

ಶಾಸ್ತ್ರೀಯವಾದ ಮಹಾಸಂಗೀತನಾದದಿಂದ ಕಲ್ಲು ಕರಗುತ್ತಿದ್ದಿತೆಂದೂ ಒಣಮರವು ಚಿಗುರುತ್ತಿದ್ದಿತೆಂದೂ ಮೇಲಿನ ಉದಾಹರಣೆಗಳಿಂದ ವ್ಯಕ್ತವಾಗುವುದು.

ಜ್ಞಾನದ ಉಪಯೋಗವು ಅಶುಭ-ಶುಭ-ಶುದ್ಧವೆಂದು ಮೂರು ಪ್ರಕಾರವಾಗಿದೆ. ಇವುಗಳಲ್ಲಿ ಅಶುಭೋಪಯೋಗದಿಂದ ಪಾಪಾಸ್ರವವೂ ಶುಭೋಪಯೋಗದಿಂದ ಪುಣ್ಯಾಸ್ರವವೂ ಶುದ್ಧೋಪಯೋಗದಿಂದ ಪಾಪ ಪುಣ್ಯಗಳ ಕ್ಷಯವೂ ಆಗುವುದು. ಶುದ್ಧೋಪಯೋಗವು ಈ ಕಾಲದಲ್ಲಿ ಮಹರ್ಷಿಗಳಿಗೂ ಕಷ್ಟಸಾಧ್ಯವಾಗಿರುವುದರಿಂದ ಅದನ್ನು ಬಿಟ್ಟು ಉಳಿದ ಅಶುಭ ಶುಭಗಳಲ್ಲಿ ಶುಭವು ಗ್ರಾಹ್ಯವೆಂದೂ ಪುಣ್ಯಾಸ್ರವಕ್ಕೂ ಪುಣ್ಯವು ಸಾಂಸಾರಿಕಸುಖಕ್ಕೂ ಕಾರಣವೆಂದೂ ಹೇಳಲ್ಪಟ್ಟಿದೆ. ಮುಖ್ಯವಾಗಿ ದೇವರ ಭಜನೆಗೂ ತತ್ತ್ವಾದಿಪ್ರತಿಪಾದನೆಗೂ ಕೀರ್ತನೆ ಪದ-ಹಾಡು ಮೊದಲಾದುವು ಶುಭೋಪಯೋಗದ ಸಾಧನಗಳೆಂದು ಬಗೆದು ಈ ಪುಸ್ತಕದಲ್ಲಿ ಅವುಗಳನ್ನೇ ಸಂಗ್ರಹಿಸಿದೆ. ಈಚೆಗೆ ದೊರೆತ ಹಲ-ಕೆಲವು ವಿಷಯಗಳನ್ನು ಪರಿಶಿಷ್ಟಗಳಲ್ಲಿ ಕೊಟ್ಟಿದೆ.

ಪೂರ್ವಮುದ್ರಿತ ಜಿನಭಜನಸಾರ—ಪುಸ್ತಕಗಳು ಮುಗಿದು ಹೋಗಿ ಬಹುಕಾಲವಾದುದರಿಂದಲೂ ಅನೇಕ ಧರ್ಮಬಾಂಧವರೂ ಮಹಿಳೆಯರೂ ಅಪೇಕ್ಷಿಸುತ್ತಿದ್ದುದರಿಂದಲೂ, ಕಾಗದ ವಗೈರೆ ಮುದ್ರಣಸಾಮಗ್ರಿಗಳ ಬೆಲೆಯು ಬಹಳವಾಗಿ ಏರಿರುವುದಾದರೂ, ಪುನರ್ಮುದ್ರಣ ಮಾಡಿಸಿರುವುದಾಗಿದೆ. ಮೇಲೆ ಹೇಳಿರುವಂತೆ ಈ ಸರ್ತಿ ಅನೇಕ ನೂತನ ವಿಷಯಗಳನ್ನೂ ಸೇರಿಸಿರುವ ಕಾರಣ ಪುಸ್ತಕವು ದೊಡ್ಡದಾಗಿರುವುದರಿಂದ ಬೆಲೆಯನ್ನೂ ಹೆಚ್ಚಿಸಬೇಕಾಗಿ ಬಂದಿತು.

ಈ ಸಲ ಮಂಗಳೂರಲ್ಲಿ ಮುದ್ರಣಮಾಡಿಸುವುದಕ್ಕೆ ಮುಖ್ಯ ಕಾರಣರಾದ ನಮ್ಮ ಮಿತ್ರರು ಶ್ರೀಮಾನ್ ಡಿ. ಪುಟ್ಟಸ್ವಾಮಿಯವರು, ಬಿ.ಎ., ಬಿ.ಎಲ್. ಅಡ್ವೋಕೇಟ್ ಅವರಿಗೂ ಮುದ್ರಣಾಲಯದ ವ್ಯವಸ್ಥಾಪಕರಾದ ಶ್ರೀಮಾನ್ ಗಣೇಶ ಶೆಣೈಯವರಿಗೂ ಬಹು ಕೃತಜ್ಞರಾಗಿರುತ್ತೇವೆ.

ಶ್ರೀ ಮಹಾವೀರನಿರ್ವಾಣಾಬ್ದ ೨೪೧೧ ಸರ್ವಜಿತ್.

ಓಂ

ವೀತರಾಗಾಯ ನಮಃ

# ಜಿನಭಜನಸಾರ

## ಮಂಗಲಾಚರಣಂ

---

### ಚತುರ್ವಿಂಶತಿತೀರ್ಥಂಕರ ಸ್ತೋತ್ರಂ

ನಾಭೇಯಂ ದೇವಪೂಜ್ಯಂ ಜಿನವರಮಜಿತಂ ಸರ್ವಲೋಕಪ್ರದೀಪಂ ।
ಸರ್ವಜ್ಞಂ ಶಂಭವಾಖ್ಯಂ ಮುನಿಗಣವೃಷಭಂ ನಂದನಂ ದೇವದೇವಂ ॥
ಕರ್ಮಾರಿಘ್ನಂ ಸುಬುದ್ಧಿಂ ವರಕಮಲನಿಭಂ ಪದ್ಮಪುಷ್ಪಾಭಿಗಂಧಂ ।
ಕ್ಷಾಂತಂ ಧ್ವಾಂತಂ ಸುಪಾರ್ಶ್ವಂ ಸಕಲಶಶಿನಿಭಂ ಚಂದ್ರನಾಮಾನಮೀಡೇ ॥

ವಿಖ್ಯಾತಂ ಪುಷ್ಪದಂತಂ ಭವಭಯಮಥನಂ ಶೀತಲಂ ಲೋಕನಾಥಂ ।
ಶ್ರೇಯಾಂಸಂ ಶೀಲಕೋಶಂ ಪ್ರವರನರಗುರುಂ ವಾಸುಪೂಜ್ಯಂ ಸುಪೂಜ್ಯಂ ॥
ಮುಕ್ತಿಂ ಧ್ವಾಂತೇಂದ್ರಿಯಶಾರ್ಥಂ ವಿಮಲಮೃಷಿಪತಿಂ[1] ಸೈಂಹಸೇನಂ
ಮುನೀಂದ್ರಂ ।

ಧರ್ಮಂ ಸದ್ಧರ್ಮಕೇತುಂ ಶಮದಮನಿಲಯಂ ಶಾಂತಿನಾಥಂ ಶರಣ್ಯಂ ॥

ಕುಂಥುಂ ಸಿದ್ಧಾಲಯಸ್ಥಂ ಶ್ರಮಣಪತಿಮರಂ ತ್ಯಕ್ತಸಾಮ್ರಾಜ್ಯಭೋಗಂ ।
ಮಲ್ಲಿಂ ವಿಖ್ಯಾತಗೋತ್ರಂ ಖಚರನರಪತಿಂ ಸುವ್ರತಂ ಸೌಖ್ಯರಾಶಿಂ ॥
ದೇವೇಂದ್ರಾರ್ಚ್ಯಂ ನಮೀಂದ್ರಂ ಹರಿಕುಲತಿಲಕಂ ನೇಮಿಚಂದ್ರಂ ಭವಾಂತ ।
ಪಾರ್ಶ್ವಂ ನಾಗೇಂದ್ರವಂದ್ಯಂ ಶರಣಮಹಮಿತೋ ವರ್ಧಮಾನಂ ಚ ಭಕ್ತ್ಯಾ ॥

ಚತುರ್ವಿಂಶತಿತೀರ್ಥೇಶಾನ್ ಚತುರ್ಗತಿನಿವೃತ್ತಯೇ ।
ವೃಷಭಾದಿಮಹಾವೀರಪರ್ಯಂತಾನ್ ಪ್ರಣಮಾಮ್ಯಹಂ ॥

---

1 ಸಿಂಹಸೇನಸ್ಯಾಪತ್ಯಂ ಪುಮಾನ್ ಸೈಂಹಸೇನಃ (ಅನಂತಃ) ತಂ.

(ಭಾಮಿನೀಷಟ್ಪದಿ)

ಶ್ರೀಮದಖಿಳೇಂದ್ರೋತ್ತಮಾಂಗ – ಸ್ತೋಮಮಣಿಮುಕುಟಾಂಶುಚುಂಚ -।
ತ್ಕೋಮಲಾಂಘ್ರಿದ್ವಯನಚಿಂತ್ಯನಜಾತನದ್ವಿತಯ ॥
ಕಾಮಮದಹರನಮಳಮುಕ್ತಿ–ಶ್ರೀಮುಖಾಬ್ಜ ದಿನೇಶನರ್ಹ – ।
ತ್ಸ್ವಾಮಿ ಮುದದಿಂದೀಗೆಮಗೆ ಕೈವಲ್ಯಸಂಪದವಾ ॥೧॥

ದುರಿತಸಂತಾನಾಷ್ಟಕವನಪ-ಹರಿಸಿ ನಿಜಗುಣಮೆಂಟು ಮೆಯ್ದೋ- ।
ರಿರಲು ಲೋಕಾಗ್ರದಲಿ ನಿತ್ಯಾನಂದ ಚಿದ್ರೂಪ ॥
ಸ್ಥಿರದಲಿರೆ ಸುಜ್ಞಾನ ಪಸರಿಸಿ-ಪರಮಮುಕ್ತಿಶ್ರೀಗೆ ಪತಿಯಾ -।
ದುರುತರ ಶ್ರೀಸಿದ್ಧರೆಮಗೀಗೊಲಿದು ಸುಖಪದವಾ ॥೨॥

ಜಯ ಜಯ ಮಹಾಮಹಿಮ ಮುಕ್ತ್ಯಾ-ಶ್ರಯ ಗುಣಾನ್ವಿತ ಭಕ್ತವತ್ಸಲ ।
ಲಯವಿಹೀನ ಮಹೇಶ ಮಾಯಾತೀತ ಮದನಹರಾ ॥
ಭಯರಹಿತ ಸರ್ವಜ್ಞ ಲೋಕ-ತ್ರಯನಮಿತಪದಕಮಲತತ್ತ್ವ - ।
ಲಯ ವಿಶುದ್ಧಜ್ಞಾನಮೂರ್ತಿಯೆ ಕರುಣಿಸೆನಗೆಂದಾ ॥೩॥

ದೇವದೇವ ಸುರೇಂದ್ರನುತ ಭ-ವ್ಯಾವಲೋಕನ ವಿಮಳಮುಕ್ತಿ–।
ಶ್ರೀವರ ಜಗನ್ನಾಥ ಜನನವಿದೂರ ಸಾಕಾರ ॥
ಪಾವನ ಪರಂಜ್ಯೋತಿ ಶಾಶ್ವತ-ಜೀವರೂಪ ಕೃಪಾಂಬುನಿಧಿ ರಾ- ।
ಜೀವಲೋಚನ ಸದ್ಗುಣಾತ್ಮಕ ಕರುಣಿಸೆನಗೆಂದಾ ॥೪॥

ನಿರುಪಮ ನಿರಾಪೇಕ್ಷ ನಿರ್ಭಯ । ನಿರತಿಶಯ ನಿರ್ಮಾಯ ನಿಸ್ಪೃಹ ।
ನಿರಜ ನಿರಹಂಕಾರ ನಿರ್ಮಲ ನಿತ್ಯನಿರ್ಲೇಪ ॥
ನಿರತ ನಿತ್ಯಾನಂದ ನಿರ್ಮದ । ನಿರಘ ನಿಷ್ಕಳ ನಿರ್ಮಲಾತ್ಮಕ ।
ನಿರಜ ನಿಜನಿಷ್ಕಾಮ ನಿಶ್ಚಲ ಕರುಣಿಸೆನಗೆಂದಾ ॥೫॥

ಸರ್ವಗತ ಸರ್ವಜ್ಞ ಸದಮಲ ।ಸರ್ವಮಯ ಸರ್ವಾಮರಾರ್ಚಿತ ।
ಸರ್ವಲೋಕೇಶ್ವರಸಮಾಹಿತ ಸರ್ವಗುಣನಿಲಯಾ ॥
ಸರ್ವಭೂತಾತ್ಮಕ ಭವಾಂತಕ । ಸರ್ವಸಂಗವಿಮುಕ್ತ ಸನ್ನುತ ।
ಸರ್ವ ದುರಿತವಿದೂರ ಸನ್ಮತಿ ಕರುಣಿಸೆನಗೆಂದಾ ॥೬॥



ವಿಶ್ವಮಯ ವಿಶ್ವೇಶ ವಿಶ್ವಗ । ವಿಶ್ವತೋಮುಖ ವಿಶ್ವಪೂಜಿತ ।
ವಿಶ್ವಲೋಚನ ವಿಶ್ವಪೂರಿತ ವಿಶ್ವದಾತಾರಾ ॥
ವಿಶ್ವರೂಪ ಮಹೇಶ್ವರೇಶ್ವರ । ವಿಶ್ವಗತ ವಿಶ್ವಾತ್ಮ ವಿಶ್ರುತ ।
ವಿಶ್ವಮೂರ್ತಿ ವಿಶುದ್ಧ ಸನ್ಮತಿ ಕರುಣಿಸೆನಗೆಂದಾ ॥೭॥

ಶ್ರೀಮದಪವರ್ಗಾಂಗನಾಸು–ಪ್ರೇಮ ನಿರ್ಜಿತಕಾಮ ಸುಗುಣಾ- ।
ರಾಮ ಧರ್ಮೋದ್ದಾಮ ನುತಸುತ್ರಾಮ ನಿಸ್ಸೀಮಾ ॥
ಸೋಮರವಿಶತಕೋಟಿತೇಜಸ-ನಾಮ ವಿಮಲ ಗುಣಾಭಿರಾಮ ಮ- ।
ಹಾಮಹಿಮ ಭವಭೀಮ ಶಂಕರ ಕರುಣಿಸೆನಗೆಂದಾ ॥೮॥

ಜಯಜಯ ಮಹಾಮಹಿಮ ನಿರುಪಮ । ಜಯಜಯ ಜಯಾನಂದ ಶುಭಕರ।
ಜಯಜಯ ಜಗನ್ನಾಥ ಜನನವಿದೂರ ವಿಜ್ಞಾನ ॥
ಜಯಜಯ ತ್ರಿದಶೇಂದ್ರವಂದಿತ । ಜಯತು ಶಾಶ್ವತ ಜಯಜಗತ್ಪತಿ ।
ಜಯಜಯೆಂದು ಕುಮಾರ ಸಂಸ್ತುತಿಸಿದನು ಜಿನಪತಿಯಾ ॥೯॥

ಸುಸ್ಥಿರಾತ್ಮ ಸಮಸ್ತಸುರನರ-ಮಸ್ತಕಸ್ಥಾಪಿತಸುರತ್ನಗ- ।
ಭಸ್ತಿಮಾಲಾಲಾಲಿತಾಂಘ್ರಿದ್ವಯ ಭವಾಂಬುನಿಧಿ- ॥
ನಿಸ್ತರಣಮಾಸ್ತೋಪ್ಪತೀಂದ್ರ ಬು-ಧಸ್ತುತ ಪ್ರಜ್ಞಾನ ವಿಮಲೋ- ।
ರಸ್ಥಲ ವಿಶಾಲಾಕ್ಷ ನಿರ್ಮಲ ಕರುಣಿಸೆನಗೆಂದಾ ॥೧೦॥

ಅಕ್ಷಯ ವಿಶಾಲಾಕ್ಷ ಸುಲಲಿತ-ವಕ್ಷ ಮೋಕ್ಷಾಧ್ಯಕ್ಷ ತ್ರಿಭುವನ- ।
ದಕ್ಷನುತಜನಪಕ್ಷ ಸಂಪೂಜಿತಸಹಸ್ರಾಕ್ಷ ॥
ಅಕ್ಷತನಿರಾಪೇಕ್ಷ ಮನ್ಮಥ-ಶಿಕ್ಷಕಾಲಕ್ಷಯ ಮಹಾತ್ಮ ಸು- ।
ದಕ್ಷಯಾಕ್ಷಾಧೀಶ ಸನ್ನುತ ಕರುಣಿಸೆನಗೆಂದಾ ॥೧೧॥

ಮಿತ್ರಶತಕೋಟಿಪ್ರಕಾಶ ಪ-ವಿತ್ರಗಾತ್ರ ಪರೇಶ ಮುಕ್ತಿಕ- ।
ಳತ್ರ ನವಶತಪತ್ರನೇತ್ರ ಭವಾಬ್ಧಿನಿಸ್ತರಣ- ॥
ಭೈತ್ರ ವಿಮಲಚರಿತ್ರ ಸುಮುನಿ-ಸ್ತೋತ್ರಪಾತ್ರ ಸುವಕ್ತ್ರ ಘನರ- ।
ತ್ನತ್ರಯಾಭರಣಾಂಕ ಕದಗಳ ತೆಗೆಯಬೇಕೆಂದಾ ॥೧೨॥

ಮಾರಮದಸಂಹಾರ ಕರುಣಾ-ಕಾರ ಗುಣಮಣಿಹಾರ ಭುವನಾ- ।
ಧಾರ ಧವಳಶರೀರ ಧರ್ಮಾಗಾರ ಸಾಕಾರಾ ॥

ಘೋರಭವಭಯದೂರ ಕರುಣಾ-ಕಾರ ನುತಮಂದಾರ ವಿಗತವಿ- ।
ಕಾರ ಸಾರಾಸಾರ ಜಿನಪತಿ ಕರುಣಿಸೆನಗೆಂದಾ ॥೧೩॥

ದೇವ ನಿಮ್ಮಾಲಯದ ಕದಗಳು । ಆವ ತೆರದಲಿ ಮುಚ್ಚಿದೊಡೆ ಲೋ- ।
ಕಾವಳಿಯ ಕದಕಿತ್ತಿಹುವು ಶಾಂತೀಶ್ವರನೆ ನಿಮ್ಮಾ ॥
ಪಾವನಾಕೃತಿಯಿಕ್ಷಿಸದೆ ಕ-ಣ್ಣಾ ಪರಿಸುತಿದೆ ಕಾವಳವು ಕರು- ।
ಣಾವಲಂಬನದಿಂ ಕವಾಟವ ತೆರೆದು ಸಲಹೆಂದಾ ॥೧೪॥

ಜಗಧರಿತ ನೀನಭವ ಮಿಗೆ ಮೂ-ಜಗಕೆ ಗತಿಮಂತಿ ನೀನೆ ಕೇಳೈ ।
ಜಗದುದಯ ನೀನಖಿಳಜಗದಾರಾಧ್ಯ ವಿಭು ನೀನೆ ॥
ಜಗಕೆ ಕಣ್ ಸುಗುಣೌಘ ಸದಮಲ-ನಗಣಿತನೆ ನೀನಿಂತು ಬಾಗಿಲ ।
ತೆಗೆಯದಿಹುದುಚಿತವೆ ಕೃಪಾಕರ ತೆಗೆಯಬೇಕೆಂದಾ ॥೧೫॥

ಭಾಸುರಾತ್ಮಕ ನೀನೆ ರಾಗ-ದ್ವೇಷ ರಹಿತನು ನೀನೆ ಪಾಯಿ- ।
ಪಾಶಮೋಚನ ನೀನೆ ನೀನೇ ಸಕಲಜಗದ್ಗುರುವು ನೀನೇ ॥
ದೋಷರಹಿತನು ನೀನೆ ಕರುಣಾ-ವಾಸ ನೀನೆ ಮಹೇಶ ನೀನೆ ಸು- ।
ರೇಶನುತ ನೀನೆಂದು ಸಂಸ್ತುತಿಸಿದನು ಜಿನಪತಿಯಾ ॥೧೬॥

(ಭಾಸ್ಕರಕವಿ)

ನಿನಗೆ ರಸಮೊಂದೆ ಶಾಂತಮು । ಜಿನೇಂದ್ರ ಮನಪಾರಸಾಂಬುನಿಧಿ
ಯೊಳಗವಗಾ- ॥
ಹನಮಿರ್ದು ವಿಕ್ಕರಸಮಂ-ಕನಸಿನೊಳಂ ನೆನೆಯದಂತು ಮಾಡೆಮಗರುಹಾ ॥೧॥

ಮಣಿಭೂಷಣಭರದಿಂ ತನು-ಕಿಣಮಪ್ಪುದದೇಕ ನಿನ್ನ ನಿರ್ಮಲಗುಣಭೂ- ॥
ಷಣಮಂ ದಯೆಗೆಯ್ ಪಡೆವೆಂ-ಪ್ರಣಯ ಮನಪವರ್ಗಲಕ್ಷ್ಮಿಗದರಿಂದ
ರುಹಾ ॥೨॥

ನಿತ್ಯಸುಖಿಪಾತ್ಮರೂಪವು- ನಿತ್ಯಸುಖಿಂ ಮೋಹರೂಪವೆಂಬ ವಿವೇಕಂ ॥
ಸತ್ಯಸ್ವರೂಪಮದರೊಳ- ಗತ್ಯಂತಾನುಭವವಿಭವಮಕ್ಕೆಮಗರುಹಾ ॥೩॥

(ಬಾಲಚಂದ್ರದೇವ).



ಕಿವಿಗಳ್ ನಿನ್ನ ಮೃದೂಕ್ತಿಯಂ ಬಯಸು ಕೇಳುತ್ತಿರ್ಕೆ ಕಣ್ಗಳ್ ಮಹೋ-
ತ್ಸವದಿಂ ನಿನ್ನನೆ ನೋಡುತಿರ್ಕೆ ಸಲೆ ಕೆಯ್ಗಳ್ ನಿನ್ನ ಪಾದಾರವಿಂ-॥
ದವ ನೋಂತರ್ಚಿಸುತಿರ್ಕೆ ಸಂದ ಮನಮೊಂದುಂ ನಿನ್ನ ದಿವ್ಯಸ್ವರೂ- ।
ಪವನಾರಾಧಿಸುತಿರ್ಕೆ ವಿಶ್ರುತವಿನೇಯಸ್ವಾರ್ಥಚಿಂತಾಮಣೀ ॥

(ಶಾಂತಿನಾಥಕವಿ)

I. I bow to the Highest Jina
Whose eyes resemble the lotus,
Whose body, a thousand and eight
Distinctions do adorn.
I bow to Shanthi Jinendra,
Whose face has the moon's effulgence;
Purity, Goodness, character and law
In whom find shelter.

II. Desirous of perfect peace,
I bow to Theerthankara the sixteenth,
From Him all peace proceeds,
And stands He fifth among,
Those who obtained the chakra,
So much desired for;
Worshipped He was by Assemblies
Of Indras and Narendras.

III. The divine tree Ashoka,
Downpour of celestial flowers,
The music of Gods, High seat
And shout of triumph,
Extending for miles afar,
The sunshade and pair of chamaras,
The surrounding Halo of Glory,
These are his eight miracles.

—o—